## ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ

**ಸಿಸಿ ನಂಬರಃ1564/2022**

**ಸಾಕ್ಷಿಃ ಸಿಡಬ್ಲ್ಯೂಃ3, ಪಿ.ಡಬ್ಲ್ಯೂಃ 2**

ಸಾಕ್ಷಿದಾರನ/ಳ ಹೆಸರು : ಮೊಹಮದ್ ಇಸ್ಮಾಯಿಲ

ತಂದೆಯ/ಗಂಡನ ಹೆಸರು :ಮೊಹಮದ ಪಾರುಕ್ ರುಕುನುದ್ದೀನ

ವಯಸ್ಸು : 22 ವರ್ಷ

ಉದ್ಯೋಗ : ಮನೆಕೆಲಸ

ವಾಸ್ತವ್ಯ : ಸಲ್ಮಾನಾ ಬಾಧ, ಭಟ್ಕಳ

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ20/07/2023**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ದಿಃ 13.11.2021 ರಂದು ರೈಸ್ ಮಿಲ್ಲಿನ ಹಿಂದುಗಡೆ ಇರುವ ಚಾಸಾ-1 ರವರ ಮನೆಯಲ್ಲಿ ಕಳ್ಳತನ ಆಗಿರುತ್ತದೆ. ನನ್ನನ್ನು ಅಲ್ಲಿಗೆ ಪಂಚನಾಮೆಗೆಂದು ಪೊಲೀಸರು ಕರೆಸಿದ್ದರು.ನನ್ನ ಸಮಕ್ಷಮ ಶ್ವಾನ ದಳದವರು ನಾಯಿಯನ್ನು ಮನೆಯಲ್ಲಿ ತಿರುಗಾಡಿಸಿ ಪರೀಕ್ಷಿಸಿ ಇರುತ್ತಾರೆ. ನನ್ನೊಂದಿಗೆ ಚಾಸಾ-1 ಮತ್ತು 2 ರವರು ಇದ್ದರು. ಶ್ವಾನ ದಳದವರು ಸ್ಥಳದಲ್ಲಿ 10.30 ರಿಂದ 12.30 ರವರೆಗೆ ಇದ್ದರು. ಪಂಚನಾಮೆಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ಅದಾದ ನಂತರ ನಮ್ಮನ್ನು ಪೊಲೀಸ ಠಾಣೆಗೆ ಕರೆಯಿಸಿ ಆಭರಣಗಳನ್ನು ತೋರಿಸಿ ಅಲ್ಲಿ ಒಂದು ದಾಖಲಾತಿಯ ಮೇಲೆ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿಯೂ ಸಹ ಚಾಸಾ-1 ಮತ್ತು 2 ರವರು ಉಪಸ್ಥಿತರಿದ್ದರು. ಸದ್ರಿ ಆಭರಣಗಳನ್ನು ಪೊಲೀಸರು ನನಗೆ 2.30 ಗಂಟೆಯಿಂದ 3.30 ಗಂಟೆಯ ನಡುವಿನವಧಿಯಲ್ಲಿ ತೋರಿಸಿರುತ್ತಾರೆ. ಅದಾದ ನಂತರ ಆರೋಪಿತರು ರಾಡ್ ನಿಂದ ಮನೆಯ ಬಾಗಿಲನ್ನು ಒಡೆದು ಮಿನಿ ವಿಧಾನ ಸೌದದ ಬಳಿ ಎಸೆದದನ್ನು ತೋರಿಸಲು ಮತ್ತು ಅದರ ಪಂಚನಾಮೆ ಜರುಗಿಸಲು ಕರೆದುಕೊಂಡು ಹೋಗಿದ್ದರು. ನನ್ನೊಂದಿಗೆ ಚಾಸಾ-2 ರವರು ಮತ್ತು ಪೊಲೀಸರು ಇದ್ದು ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ. ಸದ್ರಿ ಪಂಚನಾಮೆಯನ್ನು 5.00-5.45 ಗಂಟೆಯವರೆಗೆ ಜರುಗಿಸಿರುತ್ತಾರೆ. ಅದಾದ ನಂತರ ಚಾಸಾ-1 ರವರ ಮನೆಗೆ ಕರೆದುಕೊಂಡು ಆರೋಪಿತನು ಏನೆನ್ನು ಒಡೆದಿರುತ್ತಾನೆಂದು ತೋರಿಸಿರುತ್ತಾರೆ. ಪೋಲಿಸರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು 6.30-7.30 ಗಂಟೆಯವರೆಗೆ ಜರುಗಿಸಿರುತ್ತಾರೆ.

ಸಾಕ್ಷಿಯು ಶ್ವಾನದಳ ಸ್ಥಳ ಪರಿಶೀಲನೆಯ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-7 ಎಂದು , ಸಾಕ್ಷಿಯ ಸಹಿಯನ್ನು ನಿಪಿ- 7 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ರಾಡ್ ಜಪ್ತಿ ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ- 8 ಎಂದು , ಸಾಕ್ಷಿಯ ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-2 ಎಂದು , ಸಾಕ್ಷಿಯ ಸಹಿಯನ್ನು ನಿಪಿ-2 ಬಿ ಎಂದು ಗುರುತಿಸಲಾಯಿತು. ಸದ್ರಿಯದರ ಸಿಡಿಯನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಠಾಣೆಯಲ್ಲಿ ಆಭಾರಣಗಳನ್ನು ತೋರಿಸುವಾಗ ತೆಗೆದ ಪೊಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-5 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಮಿನಿ ವಿಧಾನ ಸೌಧದ ಬಳಿ ರಾಡನ್ನು ಗುರುತಿಸುವ ವೇಳೆ ತೆಗೆದ ಪೊಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-9 ಎಂದು ಗುರುತಿಸಲಾಯಿತು. ಸಾಕ್ಷಿಯು ಆರೋಪಿತನು ಕಳ್ಳತನ ಮಾಡಿದ ಸ್ಥಳವನ್ನು ತೋರಿಸಿದುದರ ಕುರಿತು ಪಂಚನಾಮೆಯನ್ನು ಜರುಗಿಸಿದ್ದು ಅದನ್ನು ನಿಪಿ- 10 ಎಂದು , ಸಾಕ್ಷಿಯ ಸಹಿಯನ್ನು ನಿಪಿ-10 ಎ ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ತೆಗೆದ ಪೊಟೋದಲ್ಲಿ ಸಾಕ್ಷಿ ತಾನು ಇರುವುದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮು. ಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಎಮ್ ಒ -1 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಪ್ ಜಿ ವಕೀಲರಿಂದ,</u>**

ನಿಪಿ-5 ರಲ್ಲಿ ಚಿನ್ನವನ್ನು ಒಪ್ಪಿಸುವ ವ್ಯಕ್ತಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಸಹಿ ಮಾಡಿದ ದಾಖಲಾತಿಗಳು ಕೈಯಿಂದ ಬರೆದದ್ದು ಆಗಿದ್ದವೋ ಅಥವಾ ಬೆರಳಚ್ಚು ಮಾಡಿದ್ದು ಆಗಿದ್ದವೋ ಎಂದು ನನಗೆ ಗೊತ್ತಿರುವುದಿಲ್ಲ. ಪಂಚನಾಮೆಗಳನ್ನು ಯಾರು ಬರೆದಿರುತ್ತಾರೆ ಮತ್ತು ಯಾರ ಹೇಳಿಕೆಯ ಮೇರೆಗೆ ಹಾಗೂ ಅವುಗಳನ್ನು ಎಲ್ಲಿ ಬರೆದಿರುತ್ತಾರೆಂದು ನನಗೆ ನೆನಪಿರುವುದಿಲ್ಲ. 4 ಪಂಚನಾಮಗಳಿಗೆ ನಾನು ಪೋಲಿಸ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ. ಎಮ್ -ಒ -1 ರ ಮೇಲೆ

ಅಂಟಿಸಿದ ಪಂಚರ ಚೀಟಿಯ ಮೇಲೆ ನನ್ನ ಸಹಿ ಇರುವುದಿಲ್ಲ. ಚಾಸಾ-1ರವರು ನಮ್ಮ ಓಣಿಯ ನಿವಾಸಿ. ಪೋಲೀಸರು ಠಾಣೆಯಲ್ಲಿ ತಯಾರಿಸಿದ ಪಂಚನಾಮೆಗಳಿಗೆ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ**

**ಪ್ರ.ದ.ನ್ಯಾ.ದಂ., ಭಟ್ಕಳ.**